**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1332/2024**

ಪಿ.ಡಬ್ಲ್ಯೂ:4

ಸಿ.ಡಬ್ಲ್ಯೂ:12

| | |
|---|---|
| ಸಾಕ್ಷಿದಾರರ ಹೆಸರು | : ಸಂಜಯ್ |
| ತಂದೆಯ ಹೆಸರು: | : ನಾಗರಾಜು |
| ವಯಸ್ಸು | : **26 ವರ್ಷ** |
| ಉದ್ಯೋಗ | : ವ್ಯಾಪಾರ |
| ವಾಸಸ್ಥಳ | : ಬಾವಿಕೆರೆ |

**ದಿನಾಂಕ: 03-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ದಿನಾಂಕ:20-06-2024 ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ಬಾವಿಕೆರೆಯಲ್ಲಿರುವ ನನ್ನ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಾಗಿ ತರೀಕೆರೆ ಕಡೆಯಿಂದ ಶಿವಮೊಗ್ಗ ಕಡೆಗೆ ಹೋಗುವ ಹೈವೇ ರಸ್ತೆಯಲ್ಲಿ ಒಂದು ಕ್ರೇನ್ ಬರುತ್ತಿದ್ದು, ಬಾವಿಕೆರೆಗೆ ಮಾರ್ಕಂಡಯ್ಯ ಮತ್ತು ಇನ್ನೊಬ್ಬರು ಅಲ್ಲೇ ಇದ್ದ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ತರೀಕೆರೆಗೆ ಹೋಗುವ ಸಮಯದಲ್ಲಿ ಕ್ರೇನ್ ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ. ದ್ವಿಚಕ್ರವಾಹನದ ಸವಾರರಿಗೆ ಸಹಾಯಮಾಡಿ ಅಂಬ್ಯುಲೆನ್ಸ್ ನಲ್ಲಿ ಕಳುಹಿಸಿರುತ್ತೇನೆ ಅಪಘಾತದ ಪ್ರಯುಕ್ತ ಮಾರ್ಕಂಡಯ್ಯ ರವರಿಗೆ ಕೈಗೆ ಫ್ರಾಕ್ಚರ್ ಆಗಿರುತ್ತದೆ ಮತ್ತೊಬ್ಬರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ.

**( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **20-06-2024** ರಂದು ಮೃತ ಯೋಗೇಶ್ ರವರು ಮಾರ್ಕಂಡಯ್ಯ ನವರು ತನ್ನ ಬೈಕಿನ ಕೆಎ 18 ಎಕ್ಸ್-8760 ಬೈಕಿನಲ್ಲಿ ಹಿಂಬದಿಯಲ್ಲಿ ಕೂರಿಸಿಕೊಂಡು ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ತರೀಕೆರೆಗೆ ಹೋಗುವ ಸಮಯದಲ್ಲಿ ಕ್ರೇನ್ ನಂ.ಕೆಎ-51-ಎಂ ಆರ್ 8138

ನೋಂದಣಿ ಸಂಖ್ಯೆಯ ಕ್ರೇನ್ ಅನ್ನು ಅತಿವೇಗೆ ಅಜಾಗೂರುಕತೆಯಿಂದ ಚಾಲನೆ ಮಾಡಿಕೊಂಡು ಯೊಗೇಶ್ ರವ ಚಲಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದು, ಯೋಗೀಶ್ ಮತ್ತು ಮಾರ್ಕಂಡಯ್ಯ ರವರು ಕ್ರೇನ್ ಕೆಳಗೆ ಸಿಲುಕಿಕೊಂಡು ಯೋಗೇಶ್ ರವರಿಗೆ ತೀವ್ರತರ ಪೆಟ್ಟಾಗಿ ಚಿಕಿತ್ಸೆ ಫಲಕಾರಿಯಾಗಿದೇ ಮೃತಪಟ್ಟಿರುತ್ತಾರೆ. ಮಾರ್ಕಂಡಯ್ಯ ರವರಿಗೆ ತೀವ್ರತರವಾದ ಗಾಯವಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತಕ್ಕೆ ಆರೋಪಿಯ ನಿರ್ಲಕ್ಷ್ಯತನ ಕಾರಣ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ</u>** <u>ಹೆಚ್ ಸಿ ಎಸ್</u> **<u>ವಕೀಲರಿಂದ.</u>**

ಪೇಟ್ರೋಲ್ ಬಂಕ್ ಎದುರುಗಡೆ ನನ್ನ ಕೋಳಿ ಅಂಗಡಿ ಇದೆ ಎಂದರೆ ಸರಿ. ರಸ್ತೆಯಿಂದ 7 ಅಡಿ ತಗ್ಗಿನಲ್ಲಿ ನನ್ನ ಅಂಗಡಿ ಇದೆ ಎಂದರೆ ಸರಿ. ನಿಮ್ಮ ಅಂಗಡಿಯಿಂದ ಪೆಟ್ರೋಲ್ ಬಂಕ್ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಂಗಡಿ ಅಕ್ಕಪಕ್ಕ ಮೀನು ಮಾಂಸ ಅಂಗಡಿ ಇದೆ ಎಂದರೆ ಸರಿ. ಅಪಘಾತನದ ಶಬ್ದ ಬಂದ ನಂತರ ಹೋಗಿ ನೋಡಿರುತ್ತೇನೆ ಎಂದರೆ ಸರಿ. ಯಾರ ತಪ್ಪಿನಿಂದ ಅಪಘಾತನ ಸಂಬವಿಸಿದೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಮಾರ್ಕಂಡಯ್ಯ ನವರು ನಮ್ಮ ಗ್ರಾಮದವರಾಗಿದ್ದು ನನ್ನ ಅಂಗಡಿಯ ಗ್ರಾಹಕರಾಗಿರುತ್ತಾರೆ ಎಂದರೆ ಸರಿ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**